# ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

## ಸಿ.ಸಿ. ನಂಃ 587/2025

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೋಲಿಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಚಂದಪ್ಪ ಮತ್ತು ಇತರರು.**

## ದೋಷಾರೋಪಣೆ.೦

ನಾನುಃ **ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ** ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಗಳಾದ

1. ಚಂದಪ್ಪ ತಂದೆ ನರಸಪ್ಪ ಕವಲಿ,
   ವಃ 50 ವರ್ಷ,
2. ಮಾಣಿಕೆಮ್ಮ ಗಂಡ ನರಸಪ್ಪ ಕವಲಿ,
   ವಃ 40 ವರ್ಷ,
3. ಮಮತಾ ತಂದೆ ನರಸಪ್ಪ ಕವಲಿ,
   ವಃ 19 ವರ್ಷ,
4. ಲಕ್ಷ್ಮೀ ಗಂಡ ಮಲ್ಲಯ್ಯ ಕವಲಿ,
   ವಃ 50 ವರ್ಷ,
5. ಬಸವರಾಜ @ ಬಾಸ್ಕರ ತಂದೆ ಹಣಮಂತ,
   ವಃ 38 ವರ್ಷ,

**ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ದಿನಾಂಕ 29.11.2024 ರಂದು ಮಃ 01.30 ಗಂಟೆ ಸುಮಾರಿಗೆ ಯಾದಗಿರಿ (ಗ್ರಾ) ಪೋಲಿಸ ಠಾಣೆಯ ಸರಹದ್ದಿಯ ಮುಂಡರಗಿ ಗ್ರಾಮದ ಹತ್ತಿರ ಚಾಸಾಃ1 ರವರ ಜಾಗದಲ್ಲಿ ಮನೆ ಕಟ್ಟುತಿರುವಾಗ ಆರೋಪಿತರಾದ ನೀವು ಬಂದು ಲೇ ಸೂಳೆ ಮಗನೆ ನಮ್ಮ ಜಾಗದಲ್ಲಿ ಯಾಕೆ ಮನೆ ಕಟ್ಟುತ್ತಿ ಮಗನೆ ಅಂತಾ ಬೈದಾಗ ಚಾಸಾಃ1 ರವರಿಗೆ ಈ ಜಾಗ ತೆಗೆದುಕೊಂಡಿನಿ ಅಂತಾ ಹೇಳಿದಾಗ ಆರೋಪಿತರಾದ ನೀವು ಲೆ ಸೂಳೆ ಮಗನೆ ನಿನಗೆ ನಾವು ಈ ಜಾಗ ಮಾರಾಟ ಮಾಡಿಲ್ಲ ಯಾಕೆ ಮನೆ ಕಟ್ಟುತ್ತಿ ಸೂಳೆ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.352 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಸುತ್ತಿಗೆಯಿಂದ ಸೊಂಟದ ಕೆಳಗೆ ಹೊಡೆದು ಗುಪ್ತ ಪೆಟ್ಟು ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.118(1) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ 2 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಹರಿ ಬಿದ್ದು ಮುಖಕ್ಕೆ ಚೂರಿದ್ದು, 3 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಕೈಯಿಂದ ಹೊಡೆದಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.115(1) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ 4 ಮತ್ತು 5 ನೇ ಆರೋಪಿತರಾದ ನೀವು

ಚಾಸಾ:1 ರವರಿಗೆ ಲೇ ಸೂಳೆ ಮಗನೆ ಈ ಜಾಗದ ತಂಟೆಗೆ ಬಂದರೆ ನಿನಗೆ ಜೀವ ಖಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.351(2) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕ: 29.11.2025.**
**ಸ್ಥಳ: ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ಯಾದಗಿರಿ.**